Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

भाग–IX अनुभाग 1

PART IX SECTION 1

ಭಾಗ IX ವಿಭಾಗ 1

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, डिसेम्बर 15, 1986 | मार्गशिर 24, 1908 (शक) | खन्ड–5 |
| No. 1 | New Delhi Monday, December 15, 1986 | Margashira 24, 1908 (Saka) | Vol. 5 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೧೫, ೧೯೮೬ | ಮಾರ್ಗಶಿರ ೨೪, ೧೯೦೮ (ಶಕ) | ಸಂಪುಟ ೫ |


## MINISTRY OF LAW AND JUSTICE

(Legislative Department)

New Delhi, October 9, 1986/Ashwayuja 17, 1908 (Saka)

The translations in Kannada of the following namely.— (1) The Societies Registration Act, 1860 (2) The Local Authorities Loans Act, 1914 (3) The Commercial Documents Evidence Act, 1939 (4) The Industrial Disputes (Banking and Insurance Companies) Act, 1949 (5) The Commissions of Inquiry Act, 1952 (6) The Employment Exchanges (Compulsory Notification of Vacancies) Act, 1959–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಸೊಸೈಟಿ ನೋಂದಣಿ ಅಧಿನಿಯಮ, ೧೮೬೦ (೨) ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, ೧೯೧೪ (೩) ವಾಣಿಜ್ಯ ದಸ್ತಾವೇಜು ಸಾಕ್ಷ್ಯ ಅಧಿನಿಯಮ, ೧೯೩೯ (೪) ಔದ್ಯಮಿಕ ವಿವಾದ (ಬ್ಯಾಂಕಿಂಗ್ ಮತ್ತು ವಿಮಾ ಕಂಪನಿ) ಅಧಿನಿಯಮ, ೧೯೪೯ (೫) ವಿಚಾರಣಾ ಆಯೋಗ ಅಧಿನಿಯಮ, ೧೯೫೨ (೬) ಉದ್ಯೋಗ ವಿನಿಮಯ ಕಛೇರಿಗಳ (ಖಾಲಿ ಸ್ಥಾನಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, ೧೯೫೯.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಉದ್ಯೋಗ ವಿನಿಯಮ ಕಛೇರಿಗಳ (ಖಾಲಿ ಸ್ಥಾನಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, 1959

(1959ರ ಅಧಿನಿಯಮ ಸಂಖ್ಯೆ 31)

[2ನೇ ಸೆಪ್ಟೆಂಬರ್, 1959.]

ಉದ್ಯೋಗ ವಿನಿಯಮ ಕಛೇರಿಗಳಿಗೆ ಖಾಲಿ ಸ್ಥಾನಗಳನ್ನು ಕಡ್ಡಾಯವಾಗಿ ಅಧಿಸೂಚಿಸಲು ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಹತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮವಾಗತಕ್ಕದ್ದು.–

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಉದ್ಯೋಗ ವಿನಿಮಯ ಕಛೇರಿಗಳ (ಖಾಲಿ ಸ್ಥಾನಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, 1959 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಒಂದು ರಾಜ್ಯದಲ್ಲಿ ಈ ಬಗ್ಗೆ ಅಂಥ ರಾಜ್ಯಕ್ಕೆ ಗೊತ್ತುಪಡಿಸಬಹುದಾದಂಥ ದಿನಾಂಕದದಂದು* ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಅಥವಾ ಒಂದು ರಾಜ್ಯದ ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.–

(ಎ) "ಸಮುಚಿತ ಸರ್ಕಾರ" ಎಂದರೆ.–

(i) (ಎ) ಯಾವುದೇ ರೈಲ್ವೆ, ಮುಖ್ಯ ಬಂದರು, ಗಣಿ ಅಥವಾ ತೈಲ ಕ್ಷೇತ್ರದ ಯಾವುದೇ ಕಾರ್ಯ ಸಂಸ್ಥೆಗೆ; ಅಥವಾ

(ಬಿ) (i) ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಂದು ಇಲಾಖೆಯ;

(ii) ಕೇಂದ್ರ ಸರ್ಕಾರದ ಅಥವಾ ಭಾಗಶಃ ಕೇಂದ್ರ ಸರ್ಕಾರ ಮತ್ತು ಭಾಗಶಃ ಒಂದು ಅಥವಾ ಹೆಚ್ಚು ರಾಜ್ಯ ಸರ್ಕಾರಗಳು ಶೇಕಡಾ ಐವತ್ತೊಂದಕ್ಕೆ ಕಡಿಮೆಯಿಲ್ಲದಂತೆ ಷೇರು ಬಂಡವಾಳವನ್ನು ಹೊಂದಿರವ ಕಂಪನಿಯ;

---

* ಅಧಿಸೂಚನೆ ಸಂಖ್ಯೆಯನ್ನು ನೋಡಿ. ಜಿ.ಎಸ್.ಆರ್. 382, ದಿನಾಂಕ: 1ನೇ ಎಪ್ರಿಲ್, 1960. ಭಾರತ ರಾಜಪತ್ರ ವಿಶೇಷ ಸಂಚಿಕೆ ಭಾಗ–II, ವಿಭಾಗ–3(i), ದೆಹಲಿ, ಹಿಮಾಚಲ ಪ್ರದೇಶ ಮತ್ತು ತ್ರಿಪುರಾ ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಆ ಎಲ್ಲಾ ರಾಜ್ಯಗಳಿಗೆ ಸಂಬಂಧಿಸಿದ ಅಧಿನಿಯಮಕ್ಕೆ ವಿಸ್ತರಿಸಲಾಗಿದೆ.

(iii) ಕೇಂದ್ರ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿತವಾದ ಕೇಂದ್ರ ಸರ್ಕಾರದ ಒಡೆತನ ಅಥವಾ ನಿಯಂತ್ರಣ ಅಥವಾ ನಿರ್ವಹಣೆಯಲ್ಲಿರುವ (ಸಹಕಾರ ಸಂಸ್ಥೆಯನ್ನು ಒಳಗೊಂಡ) ನಿಗಮದ

– ಒಡೆತನ, ನಿಯಂತ್ರಣ/ನಿರ್ವಹಣೆಯಲ್ಲಿರುವ ಯಾವುದೇ ಕಾರ್ಯ ಸಂಸ್ಥೆಗೆ ಸಂಬಂದೀಸಿದಂತೆ ಕೇಂದ್ರ ಸರ್ಕಾರ;

(2) ಇತರ ಯಾವುದೇ ಕಾರ್ಯ ಸಂಸ್ಥೆಯ ಸಂಬಂಧದಲ್ಲಿ, ಆ ಇತರ ಕಾರ್ಯ ಸಂಸ್ಥೆ ಇರುವ ರಾಜ್ಯದ ಸರ್ಕಾರ;

(ಬಿ) "ನೌಕರ" ಎಂದರೆ ಒಂದು ಕಾರ್ಯ ಸಂಸ್ಥೆಯಲ್ಲಿ ಪರಿಶ್ರಮ ಧನಕ್ಕಾಗಿ ಯಾವುದೇ ಕೆಲಸವನ್ನು ಮಾಡಲು ಕಾರ್ಯ ಸಂಸ್ಥೆಯಲ್ಲಿ ನಿಯೋಜಿತನಾದ ಯಾರೇ ವ್ಯಕ್ತಿ;

(ಸಿ) "ನಿಯೋಜಕ" ಎಂದರೆ, ಒಂದು ಕಾರ್ಯ ಸಂಸ್ಥೆಯಲ್ಲಿ ಪರಿಶ್ರಮ ಧನಕ್ಕಾಗಿ ಯಾವುದೇ ಕೆಲಸವನ್ನು ಮಾಡಲು ಒಬ್ಬ ಅಥವಾ ಹೆಚ್ಚಿನ ಇತರ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳುವ ಯಾರೇ ವ್ಯಕ್ತಿ ಮತ್ತು ಅಂಥ ಕಾರ್ಯ ಸಂಸ್ಥೆಯಲ್ಲಿ ನೌಕರರ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ವಹಿಸಿಕೊಡಲಾದ ಯಾರೇ ವ್ಯಕ್ತಿಯು ಒಳಗೊಳ್ಳುತ್ತಾನೆ.

(ಡಿ) "ಉದ್ಯೋಗ ವಿನಿಮಯ ಕಛೇರಿ" ಎಂದರೆ,–

(i) ನೌಕರರನ್ನು ನೇಮಿಸಿಕೊಳ್ಳಬಯಸುವ ವ್ಯಕ್ತಿಗಳು;

(ii) ಉದ್ಯೋಗವನ್ನು ಹುಡುಕುವ ವ್ಯಕ್ತಿಗಳು; ಮತ್ತು

(iii) ಉದ್ಯೋಗವನ್ನು ಹುಡುಕುವ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳಬಹುದಾದ ಖಾಲಿ ಸ್ಥಾನಗಳು.

- ಇವುಗಳ ಬಗ್ಗೆ ರಿಜಿಸ್ಟರುಗಳನ್ನು ಇಡುವುದರ ಮೂಲಕ ಅಥವಾ ಅನ್ಯಥಾ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಒದಗಿಸಲು ಸರ್ಕಾರದಿಂದ ಸ್ಥಾಪಿಸಲಾದ ಮತ್ತು ನಿರ್ವಹಿಸಲಾದ ಯಾವುದೇ ಕಛೇರಿ ಅಥವಾ ಸ್ಥಳ;

(ಇ) "ಕಾರ್ಯ ಸಂಸ್ಥೆ" ಎಂದರೆ,–

(ಎ) ಯಾವುದೇ ಕಚೇರಿ, ಅಥವಾ

(ಬಿ) ಯಾವುದೇ ಉದ್ಯಮ, ವ್ಯಾಪಾರ, ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿರುವ ಯಾವುದೇ ಸ್ಥಳ;

(ಎಫ್) "ಸರ್ಕಾರಿ ವಲಯದ ಕಾರ್ಯ ಸಂಸ್ಥೆ" ಎಂದರೆ,–

(1) ಸರ್ಕಾರ ಅಥವಾ ಸರ್ಕಾರದ ಇಲಾಖೆಯ;

(2) ಕಂಪನಿಗಳ ಅಧಿನಿಯಮ, 1956 (1956ರ 1)ರ ಪ್ರಕರಣ 617ರಲ್ಲಿ ಪರಿಭಾಷಿಸಿದಂತೆ ಒಂದು ಸರ್ಕಾರಿ ಕಂಪನಿಯ;

(3) ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಮೇರೆಗೆ (ಸಹಕಾರಿ ಸಂಸ್ಥೆಯನ್ನು ಒಳಗೊಂಡಂತೆ) ಸ್ಥಾಪಿತವಾಗಿದ್ದು, ಸರ್ಕಾರದ ಒಡೆತನ, ನಿಯಂತ್ರಣ ಅಥವಾ ನಿರ್ವಹಣೆಯಲ್ಲಿರುವ ಒಂದು ನಿಗಮದ;

(4) ಒಂದು ಸ್ಥಳೀಯ ಪ್ರಾಧಿಕಾರ

– ಒಡೆತನ, ನಿಯಂತ್ರಣ ಅಥವಾ ನಿರ್ವಹಣೆಯಲ್ಲಿರುವ ಒಂದು ಕಾರ್ಯ ಸಂಸ್ಥೆ.

(ಜಿ) "ಖಾಸಗಿ ವಲಯದ ಕಾರ್ಯ ಸಂಸ್ಥೆ" ಎಂದರೆ, ಸರ್ಕಾರೀ ವಲಯದ ಕಾರ್ಯ ಸಂಸ್ಥೆಯಲ್ಲದ ಮತ್ತು ಪರಿಶ್ರಮಧನಕ್ಕಾಗಿ ಸಾಮಾನ್ಯವಾಗಿ ಇಪ್ಪತ್ತೈದು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳು ನಿಯೋಜಿತರಾಗಿರುವ ಕಾರ್ಯ ಸಂಸ್ಥೆ;

(ಎಚ್) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದದು;

(ಐ) "ಅಕುಶಲ ಕಛೇರಿ ಕೆಲಸ" ಎಂದರೆ, ಒಂದು ಕಾರ್ಯ ಸಂಸ್ಥೆಯಲ್ಲಿ ಈ ಕೆಳಕಂಡ ಯಾವುದೇ ಪ್ರವರ್ಗಗಳ ನೌಕರರು ಮಾಡುವ ಕೆಲಸ, ಎಂದರೆ.–

(1) ದಫ್ತರಿ;

(2) ಜಮೇದಾರ, ಆರ್ಡರ್ಲಿ ಮತ್ತು ಜವಾನ;

(3) ಧೂಳು ಹೊಡೆಯುವವ ಅಥವಾ ಫರಾಶ್;

(4) ಕಟ್ಟು ಅಥವಾ ದಾಖಲೆಗಳನ್ನು ಎತ್ತಿಕೊಂಡು ಹೋಗುವವನು;

(5) ಪ್ರೊಸೆಸ್ಸನ್ನು ಜಾರಿ ಮಾಡುವವನು;

(6) ಕಾವಲುಗಾರ;

(7) ಕಸ ಗುಡಿಸುವವನು;

(8) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಕುಶಲ ಕಛೇರಿ ಕೆಲಸವೆಂದು ಘೋಷಿಸಬಹುದಾದ ಯಾವುದೇ ದಿನನಿತ್ಯದ ಅಥವಾ ಅಕುಶಲ ಕೆಲಸವನ್ನು ಮಾಡುವ ಇತರ ಯಾರೇ ನೌಕರ.

**3. (1) ಕೆಲವು ಖಾಲಿ ಸ್ಥಾನಗಳ ಸಂಬಂಧದಲ್ಲಿ ಈ ಅಧಿನಿಯಮವು ಅನ್ವಯಿಸತಕ್ಕದ್ದಲ್ಲ.–** ಈ ಅಧಿನಿಯಮವು,–

(ಎ) ಕೃಷಿ ಅಥವಾ ಫಾರಂ ಯಂತ್ರ ಸಾಮಗ್ರಿಗಳ ಚಾಲಕರನ್ನು ಬಿಟ್ಟು ಖಾಸಗಿ ವಲಯದ ಯಾವುದೇ ಕಾರ್ಯ ಸಂಸ್ಥೆಯಲ್ಲಿ (ತೋಟಗಾರಿಕೆಯನ್ನೂ ಒಳಗೊಂಡಂತೆ) ಕೃಷಿಯಲ್ಲಿ ಯಾವುದೇ ಉದ್ಯೋಗದಲ್ಲಿ;

(ಬಿ) ಮನೆ ಕೆಲಸದ ಯಾವುದೇ ಉದ್ಯೋಗದಲ್ಲಿ;

(ಸಿ) ಒಟ್ಟು ಅವಧಿ ಮೂರು ತಿಂಗಳುಗಳಿಗಿಂತ ಕಡಿಮೆಯಿರುವ ಯಾವುದೇ ಉದ್ಯೋಗದಲ್ಲಿ;

(ಡಿ) ಅಕುಶಲ ಕಛೇರಿ ಕೆಲಸವನ್ನು ಮಾಡಲು ಯಾವುದೇ ಉದ್ಯೋಗದಲ್ಲಿ;

(ಇ) ಸಂಸತ್ತಿನ ಸಿಬ್ಬಂದಿಗೆ ಸಂಬಂಧಪಟ್ಟ ಯಾವುದೇ ಉದ್ಯೋಗದಲ್ಲಿ

– ಇರುವ ಖಾಲಿ ಸ್ಥಾನಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಸಂಬಂಧದಲ್ಲಿ ಅನ್ಯಥಾ ನಿರ್ದೇಶಿಸಿದ ಹೊರತು, ಈ ಅಧಿನಿಯಮವು,–

(ಎ) ಬಡ್ತಿ ಮೂಲಕ ಅಥವಾ ಅದೇ ಕಾರ್ಯ ಸಂಸ್ಥೆಯ ಯಾವುದೇ ಶಾಖೆಯ ಅಥವಾ ಇಲಾಖೆಯ ಹೆಚ್ಚುವರಿ ಸಿಬ್ಬಂದಿಯನ್ನು ವಿಲೀನಗೊಳಿಸುವ ಮೂಲಕ ಅಥವಾ ಒಕ್ಕೂಟ ಅಥವಾ ರಾಜ್ಯ ಲೋಕಸೇವಾ ಆಯೋಗ ಮತ್ತು ಅದರಂಥ ಯಾವುದೇ ಸ್ವತಂತ್ರ ಏಜನ್ಸಿಯು ನಡೆಸಿದ ಯಾವುದೇ ಪರೀಕ್ಷೆ ಅಥವಾ ಸಂದರ್ಶನದ ಫಲಿತಾಂಶದ ಮೇಲೆ ಅಥವಾ ಶಿಫಾರಸ್ಸಿನ ಮೇಲೆ ಭರ್ತಿ ಮಾಡಲು ಉದ್ದೇಶಿಸಲಾದ ಖಾಲಿ ಸ್ಥಾನಗಳ;

(ಬಿ) ತಿಂಗಳಿಗೆ ಅರವತ್ತು ರೂಪಾಯಿಗಳಿಗೂ ಕಡಿಮೆ ಪರಿಶ್ರಮ ಧನವನ್ನು ಹೊಂದಿರುವ ಉದ್ಯೋಗದಲ್ಲಿನ ಖಾಲಿಸ್ಥಾನಗಳ

– ಸಂಬಂಧದಲ್ಲಿಯೂ ಸಹ ಅನ್ವಯಿಸತಕ್ಕದ್ದಲ್ಲ.

**4. ಉದ್ಯೋಗ ವಿನಿಮಯ ಕಛೇರಿಗಳಿಗೆ ಖಾಲಿ ಸ್ಥಾನಗಳ ಬಗ್ಗೆ ತಿಳಿಸುವಿಕೆ.–** (1) ಯಾವುದೇ ರಾಜ್ಯದಲ್ಲಿ ಅಥವಾ ಅದರ ಪ್ರದೇಶದಲ್ಲಿ ಈ ಅಧಿನಿಯಮವು ಪ್ರಾರಂಭವಾದ ಆನಂತರ ಆ ರಾಜ್ಯದ ಅಥವಾ ಪ್ರದೇಶದ ಸರ್ಕಾರಿ ವಲಯದ ಪ್ರತಿಯೊಂದು ಕಾರ್ಯ ಸಂಸ್ಥೆಯ ನಿಯೋಜಕನು, ಆ ಕಾರ್ಯ ಸಂಸ್ಥೆಯ ಯಾವುದೇ ಉದ್ಯೋಗದ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಮುಂಚೆ, ನಿಯಮಿಸಬಹುದಾದಂಥ ಉದ್ಯೋಗ ವಿನಿಮಯ ಕಛೇರಿಗಳಿಗೆ ಆ ಖಾಲಿ ಸ್ಥಾನವನ್ನು ಅಧಿಸೂಚಿಸತಕ್ಕದ್ದು.

(2) ಸಮುಚಿತ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿರುವ ಅಧಿಸೂಚನೆಯ ಮೂಲಕ ಆ ಆಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ದಿನಾಂಕದಿಂದ ಖಾಸಗಿ ವಲಯದ ಪ್ರತಿಯೊಂದು ಕಾರ್ಯಸಂಸ್ಥೆಯ ಅಥವಾ ಖಾಸಗಿ ವಲಯದ ಕಾರ್ಯ ಸಂಸ್ಥೆಗಳ ಯಾವುದೇ ವರ್ಗ ಅಥವಾ ಪ್ರವರ್ಗಕ್ಕೆ ಸಂಬಂಧಪಟ್ಟ ಪ್ರತಿಯೊಂದು ಕಾರ್ಯ ಸಂಸ್ಥೆಯ ನಿಯೋಜನಕನು ಆ ಕಾರ್ಯ ಸಂಸ್ಥೆಯಲ್ಲಿ ಯಾವುದೇ ಉದ್ಯೋಗದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಮುಂಚೆ ನಿಯಮಿಸಬಹುದಾದಂಥ ಉದ್ಯೋಗ ವಿನಿಮಯ ಕಛೇರಿಗಳಿಗೆ ಅಧಿಸೂಚಿಸತಕ್ಕದ್ದು ಎಂದು ಅಗತ್ಯಪಡಿಸತಕ್ಕದ್ದು ಮತ್ತು ಆಮೇಲೆ ನಿಯೋಜನಕನು ಅಂಥ ಕಡ್ಡಾಯ ಕೋರಿಕೆಯನ್ನು ಪಾಲಿಸತಕ್ಕದ್ದು.

(3) ಉಪ ಪ್ರಕರಣ (1)ರಲ್ಲಿ ಮತ್ತು ಉಪ ಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಖಾಲಿ ಸ್ಥಾನಗಳನ್ನು ಉದ್ಯೋಗ ವಿನಿಮಯ ಕಛೇರಿಗಳಿಗೆ ಅಧಿಸೂಚಿಸತಕ್ಕ ರೀತಿ ಮತ್ತು ಅಂಥ ಖಾಲಿ ಸ್ಥಾನಗಳು ಉಂಟಾಗಿರುವ ಅಥವಾ ಉಂಟಾಗಲಿರುವಂಥ ಉದ್ಯೋಗಗಳ ವಿವರಗಳು ನಿಯಮಿಸಬಹುದಾದಂತಿರತಕ್ಕದ್ದು.

(4) ಉಪ ಪ್ರಕರಣ (1) ಮತ್ತು (2)ರಲ್ಲಿ ಇರುವುದಾವುದೂ, ಯಾವುದೇ ಖಾಲಿ ಸ್ಥಾನಕ್ಕೆ ಆ ಖಾಲಿ ಸ್ಥಾನವನ್ನು ಆ ಯಾವುದೇ ಉಪ ಪ್ರಕರಣದ ಮೇರೆಗೆ ಅಧಿಸೂಚಿಸಲಾಗಿತ್ತು ಎಂಬ ಕಾರಣ ಮಾತ್ರದಿಂದಲೇ ಯಾರೇ ವ್ಯಕ್ತಿಯನ್ನು ಉದ್ಯೋಗ ವಿನಿಮಯ ಕಛೇರಿಯ ಮೂಲಕ ನೌಕರಿ ಭರ್ತಿ ಮಾಡಿಕೊಳ್ಳಲು ನಿಯೋಜಕನ ಮೇಲೆ ಯಾವುದೇ ಹೊಣೆಗಾರಿಕೆಯನ್ನು ವಿಧಿಸುತ್ತದೆಂದು ಭಾವಿಸತಕ್ಕದ್ದಲ್ಲ.

**5. ನಿಯೋಜಕರು, ನಿಯಮಿಸಲಾದ ನಮೂನೆಯಲ್ಲಿ ಮಾಹಿತಿ ಮತ್ತು ವಿವರ ಪಟ್ಟಿಕೆಗಳನ್ನು ಒದಗಿಸತಕ್ಕದ್ದು.–** (1) ಯಾವುದೇ ರಾಜ್ಯ ಅಥವಾ ಅದರ ಪ್ರದೇಶದಲ್ಲಿ ಈ ಅಧಿನಿಯಮವು ಪ್ರಾರಂಭವಾದ ಅನಂತರ ಆ ರಾಜ್ಯ ಅಥವಾ ಪ್ರದೇಶದಲ್ಲಿ ಸರ್ಕಾರಿ ವಲಯದ ಪ್ರತಿಯೊಂದು ಕಾರ್ಯ ಸಂಸ್ಥೆಯ ನಿಯೋಜಕನು, ಆ ಕಾರ್ಯ ಸಂಸ್ಥೆಯಲ್ಲಿ ಉಂಟಾಗಿರುವ ಅಥವಾ ಉಂಟಾಗಲಿರುವ ಖಾಲಿ

ಸ್ಥಾನಗಳ ಸಂಬಂಧದಲ್ಲಿ ನಿಯಮಿಸಬಹುದಾದಂಥ ಉದ್ಯೋಗ ವಿನಿಮಯ ಕಛೇರಿಗಳಿಗೆ ನಿಯಮಿಸಬಹುದಾದಂಥ ಮಾಹಿತಿ ಅಥವಾ ವಿವರ ಪಟ್ಟಿಕೆಯನ್ನು ಒದಗಿಸತಕ್ಕದ್ದು.

(2) ಸಮುಚಿತ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಖಾಸಗಿ ವಲಯದ ಪ್ರತಿಯೊಂದು ಕಾರ್ಯ ಸಂಸ್ಥೆಯ ಅಥವಾ ಖಾಸಗಿ ವಲಯದ ಕಾರ್ಯ ಸಂಸ್ಥೆಗಳ ಯಾವುದೇ ವರ್ಗ ಅಥವಾ ಪ್ರವರ್ಗಕ್ಕೆ ಸಂಬಂಧಪಟ್ಟ ಪ್ರತಿಯೊಂದು ಕಾರ್ಯ ಸಂಸ್ಥೆಯ ನಿಯೋಜಕನು ಆ ಕಾರ್ಯ ಸಂಸ್ಥೆಯಲ್ಲಿ ಉಂಟಾಗಿರುವ ಅಥವಾ ಉಂಟಾಗಲಿರುವ ಖಾಲಿ ಸ್ಥಾನಗಳ ಸಂಬಂಧದಲ್ಲಿ ನಿಯಮಿಸಬಹುದಾದಂಥ ಉದ್ಯೋಗ ವಿನಮಯ ಕಛೇರಿಗಳಿಗೆ ನಿಯಮಿಸಬಹುದಾದಂಥ ಮಾಹಿತಿ ಅಥವ ವಿವರಪಟ್ಟಿಕೆಯನ್ನು ಒದಗಿಸತಕ್ಕುದೆಂದು ಅಗತ್ಯಪಡಿಸಬಹುದು ಮತ್ತು ಆ ಮೇಲೆ ನಿಯೋಜಕನು ಅಂಥ ಕೋರಿಕೆಯನ್ನು ಪಾಲಿಸತಕ್ಕದ್ದು.

(3) ಯಾವ ನಮೂನೆಯಲ್ಲಿ ಮತ್ತು ಯಾವ ಕಾಲಾಂತರಗಳಲ್ಲಿ ಅಂಥ ಮಾಹಿತಿಯನ್ನು ಅಥವಾ ವಿವರ ಪಟ್ಟಿಕೆಯನ್ನು ಒದಗಿಸುತಕ್ಕದ್ದು ಎಂಬುದು ಮತ್ತು ಅವು ಒಳಗೊಂಡಿರಬೇಕಾದ ವಿವರಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**6. ದಾಖಲೆಗಳು ಅಥವಾ ದಸ್ತಾವೇಜುಗಳನ್ನು ನೋಡುವ ಹಕ್ಕು.–** ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ಸರ್ಕಾರಿ ಅಧಿಕಾರಿ ಅಥವಾ ಅವನಿಂದ ಬರಹದಲ್ಲಿ ಅಧಿಕೃತನಾದ ಯಾರೇ ವ್ಯಕ್ತಿ, ಪ್ರಕರಣ 5ರ ಮೇರೆಗೆ ಯಾವುದೇ ಮಾಹಿತಿ ಅಥವಾ ವಿವರಪಟ್ಟಿಕೆಯನ್ನು ಒದಗಿಸುವಂತೆ ಅಗತ್ಯಪಡಿಸಲಾದ ಯಾರೇ ನಿಯೋಜಕನ ವಶದಲ್ಲಿರುವ ಯಾವುದೇ ಸುಸಂಬದ್ಧ ದಾಖಲೆ ಅಥವಾ ದಸ್ತಾವೇಜನ್ನು ನೋಡುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಅಂಥ ದಾಖಲೆ ಅಥವಾ ದಸ್ತಾವೇಜು ಇದೆಯೆಂದು ತಾನು ನಂಬುವ ಯಾವುದೇ ಆವರಣವನ್ನು ಯಾವುದೇ ಯುಕ್ತ ಕಾಲದಲ್ಲಿ ಪ್ರವೇಶಿಸಬಹುದು ಮತ್ತು ಸುಸಂಬದ್ಧ ದಾಖಲೆಗಳ ಅಥವಾ ದಸ್ತಾವೇಜುಗಳ ಅಥವಾ ದಸ್ತಾವೇಜುಗಳನ್ನು ಪರಿಶೀಲಿಸಬಹುದು ಅಥವಾ ಪ್ರತಿಗಳನ್ನು ತೆಗೆದುಕೊಳ್ಳಬಹುದು ಅಥವಾ ಆ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದ ಯಾವುದೇ ಮಾಹಿತಿಯನ್ನು ಪಡೆಯಲು ಅವಶ್ಯವಿರುವ ಯಾವುದೇ ಪ್ರಶ್ನೆಯನ್ನು ಕೇಳಬಹುದು.

**7. ದಂಡಗಳು.–** (1) ಯಾರೇ ನಿಯೋಜಕನು, ಪ್ರಕರಣ 4ರ ಉಪ ಪ್ರಕರಣ (1)ರ ಅಥವಾ ಉಪ ಪ್ರಕರಣ (2)ರನ್ನು ಉಲ್ಲಂಘಿಸಿ ಯಾವುದೇ ಖಾಲಿ ಸ್ಥಾನವನ್ನು ಆ ಉದ್ದೇಶಕ್ಕಾಗಿ ನಿಯಮಿಸಲಾದ ಉದ್ಯೋಗ ವಿನಿಮಯ ಕಛೇರಿಗಳಿಗೆ ಅಧಿಸೂಚಿಸಲು ತಪ್ಪಿದರೆ, ಅವನು ಮೊದಲನೆಯ ಅಪರಾಧಕ್ಕೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಪ್ರತಿ

ಅಪರಾಧಕ್ಕೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಯಾರೇ ವ್ಯಕ್ತಿಯು,–

(ಎ) ಯಾವದೇ ಮಾಹಿತಿ ಅಥವಾ ವಿವರ ಪಟ್ಟಿಕೆಯನ್ನು ಒದಗಿಸುವಂತೆ ಅಗತ್ಯಪಡಿಸಲಾದ ಯಾರೇ ವ್ಯಕ್ತಿಯು.–

(i) ಅಂಥ ಮಾಹಿತಿ ಅಥವಾ ವಿವರಪಟ್ಟಿಕೆಯನ್ನು ಒದಗಿಸಲು ನಿರಾಕರಿಸಿದರೆ, ಅಥವಾ ಉಪೇಕ್ಷೆ ಮಾಡಿದರೆ; ಅಥವಾ

(ii) ತನಗೆ ಸುಳ್ಳೆಂದು ಗೊತ್ತಿರುವ ಯಾವುದೇ ಮಾಹಿತಿ ಅಥವಾ ವಿವರಪಟ್ಟಿಕೆಯನ್ನು ಒದಗಿಸಿದರೆ ಅಥವಾ ಒದಗಿಸುವಂತೆ ಮಾಡಿದರೆ; ಅಥವಾ

(ಬಿ) ಪ್ರಕರಣ 6ರ ಮೂಲಕ ಪ್ರದತ್ತವಾದ, ಸುಸಂಬದ್ಧ ದಾಖಲೆಗಳು ಅಥವಾ ದಸ್ತಾವೇಜುಗಳನ್ನು ನೋಡುವ ಹಕ್ಕಿಗೆ ಅಥವಾ ಪ್ರವೇಶಿಸುವ ಹಕ್ಕಿಗೆ ಅಡ್ಡಿಯುಂಟು ಮಾಡಿದರೆ

– ಅವನು ಮೊದಲನೆಯ ಅಪರಾಧಕ್ಕೆ ಇನ್ನೂರು ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಪ್ರತಿಯೊಂದು ಅಪರಾಧಕ್ಕೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**8. ಅಪರಾಧಗಳ ಸಂಜ್ಞಾನ.–** ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ, ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ಸರ್ಕಾರಿ ಅಧಿಕಾರಿಯ ಅಥವಾ ಆ ಅಧಿಕಾರಿಯಿಂದ ಬರಹದಲ್ಲಿ ಅಧಿಕೃತನಾದ ಯಾರೇ ವ್ಯಕ್ತಿಯ ಮೂಲಕವಲ್ಲದ ಅಥವಾ ಅವನಿಂದ ಮಂಜೂರಾತಿ ಪಡೆದಲ್ಲದೆ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ.

**9. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆ ಹೂಡತಕ್ಕದ್ದಲ್ಲ.

**10. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಭಾದಕವಾಗದಂತೆ ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ.–

(ಎ) ಖಾಲಿ ಸ್ಥಾನಗಳನ್ನು ಯಾವ ಉದ್ಯೋಗ ವಿನಿಮಯ ಕಛೇರಿಗೆ ಅಥವಾ ಕಛೇರಿಗಳಿಗೆ ಮತ್ತು ಯಾವ ಕಾಲಾವಧಿಯೊಳಗೆ ಅಧಿಸೂಚಿಸಬೇಕೆಂದು ಮತ್ತು ಅಂಥ ಖಾಲಿ ಸ್ಥಾನಗಳು ಯಾವ ಉದ್ಯೋಗಗಳಲ್ಲಿ ಉಂಟಾಗಿವೆಯೋ ಅಥವಾ ಉಂಟಾಗಲಿವೆಯೋ ಅವುಗಳ ವಿವರಗಳು;

(ಬಿ) ಪ್ರಕರಣ 5ರ ಮೇರೆಗೆ ಅಗತ್ಯಪಡಿಸಲಾದ ಮಾಹಿತಿ ಮತ್ತು ವಿವರ ಪಟ್ಟಿಕೆಯನ್ನು ಒದಗಿಸತಕ್ಕ ನಮೂನೆ ಮತ್ತು ರೀತಿ ಮತ್ತು ಕಾಲದ ಅಂತರಗಳು ಮತ್ತು ಅವು ಒಳಗೊಂಡಿರಬೇಕಾದ ವಿವರಗಳು;

(ಸಿ) ಪ್ರಕರಣ 6ರ ಮೂಲಕ ಪ್ರದತ್ತವಾದ ದಸ್ತಾವೇಜುಗಳನ್ನು ನೋಡುವ ಹಕ್ಕನ್ನು ಮತ್ತು ಪ್ರವೇಶಿಸುವ ಹ್ಕಕನ್ನು ಚಲಾಯಿಸಬಹುದಾದ ಅಧಿಕಾರಿಗಳು ಮತ್ತು ರೀತಿ;

(ಡಿ) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ;

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಭಾದಕವನ್ನುಂಟು ಮಾಡತಕ್ಕದ್ದಲ್ಲ.